ದಿನಾಂಕ - 11/09/2019
ವಾರ - ಬುಧವಾರ
ಪತ್ರಿಕೆ - ಪ್ರಜಾವಾಣಿ

# ಆಯುರ್ವೇದ ಪದ್ಧತಿಯಿಂದ ಆರೋಗ್ಯ

## ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಾಶುಪಾಲ ಅಹಲ್ಯಾ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

**ತುಮಕೂರು:** ಪ್ರಾಚೀನ ಕಾಲದಿಂದ ಇಂದಿನವರೆಗೆ ಬಳಕೆಯಲ್ಲಿರುವ ಆಯುರ್ವೇದ ಪದ್ಧತಿಯಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಬೆಂಗಳೂರು ವಿಶ್ವವಿದ್ಯಾನಿಲಯದ ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲರಾದ ಡಾ.ಅಹಲ್ಯಾ ನುಡಿದರು.

ನಗರದ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಸಸ್ಯವಿಜ್ಞಾನ ವಿಭಾಗದಿಂದ ವಿದ್ಯಾರ್ಥಿಗಳಿಗಾಗಿ 'ಆರೋಗ್ಯ ಮತ್ತು ಆಯುರ್ವೇದ' ಎಂಬ ವಿಷಯ ಕುರಿತು ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದರು.

ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಗ್ರಂಥಾಲಯಕ್ಕೆ ಆಯುರ್ವೇದಕ್ಕೆ ಸಂಬಂಧಪಟ್ಟ ಪುಸ್ತಕಗಳು, ಔಷದೀಯ ಸಸ್ಯಗಳಾದ



ಆರೋಗ್ಯ ಮತ್ತು ಆಯುರ್ವೇದ ಕಾರ್ಯಕ್ರಮ ಉದ್ಘಾಟಿಸಿದ ಗಣ್ಯರು

ಅಳಲೆ, ಮಧುನಾಶಿನಿ, ಬಿಲ್ವ ಸಸ್ಯಗಳನ್ನು ಕೊಡುಗೆ ನೀಡಿದರು.

ವಿಜಯಲಕ್ಷ್ಮಿ ಮಾತನಾಡಿ, ಶರೀರದ ವಿವಿಧ ಅಂಗಗಳ ಸ್ವಾಸ್ಥ್ಯ ಕಾಪಾಡಲು ಆರ್ಯುವೇದ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದರು.

ವೈದ್ಯ ಶಿವರಾಮ್ ಆಯುರ್ವೇದ ಪ್ರಾಮುಖ್ಯ ವಿವರಿಸಿದರು.

ಕಾರ್ಯಾಗಾರವನ್ನು ಎನ್. ಪ್ರಸನ್ನಕುಮಾರ್ ಉದ್ಘಾಟಿಸಿದರು. ಬೆಂಗಳೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ವಿದ್ಯಾಲಯದ ಡಾ.ಶ್ರೀನಿವಾಸ್ ಯಾದವ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಆರ್. ಆನಂದಕುಮಾರಿ, ಸಂಯೋಜಕ ಸೋಮಶೇಖರಯ್ಯ, ಉಪನ್ಯಾಸಕರಾದ ಕುಮಾರಸ್ವಾಮಿ, ಹರ್ಷಿ, ಪದ್ಮಶ್ರೀ, ಸಿಂಧು ಇದ್ದರು.

ನಂತರ ಸಿದ್ಧಗಂಗಾ ಮಠಕ್ಕೆ ತೆರಳಿ, ಸಿದ್ಧಲಿಂಗ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ 37 ಬುದ್ಧಿಮಾಂಧ್ಯ ಮಕ್ಕಳು ಹಾಗೂ 40 ಅಂಧ ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ಔಷಧ ವಿತರಿಸಿದರು.

Scanned with ACE Scanner

ದಿನಪತ್ರಿಕೆ ಹೆಸರು : ಪ್ರಜಾ ಪ್ರಗತಿ
ವಾರ : ಶನಿವಾರ
ದಿನಾಂಕ : 21/09/2019

# ಬರವಣಿಗೆಯ ಕೌಶಲ್ಯ ಕುರಿತ ಕಾರ್ಯಾಗಾರ

ತುಮಕೂರು

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಬರವಣಿಗೆಯ ಕೌಶಲ್ಯ ಕುರಿತು ಕಾರ್ಯಾಗಾರವನ್ನು ಇತ್ತೀಚೆಗೆ ಏರ್ಪಡಿಸಲಾಗಿತ್ತು. ಸಮಾರಂಭವನ್ನು ಉದ್ಘಾಟಿಸಿದ ತುಮಕೂರು ವೀರಶೈವ ಸಹಕಾರ ಬ್ಯಾಂಕಿನ ಹಿರಿಯ ಸಹಾಯಕ ಗುಬ್ಬಿ ಸತೀಶ್ ಬರವಣಿಗೆಗೆ ತೊಡಗುವ ಯುವ ಬರಹಗಾರರು ಉತ್ತಮ ಕೃತಿಗಳನ್ನು ಓದಬೇಕು. ಸುತ್ತಮುತ್ತಲಿನ ಪರಿಸರವನ್ನು ನೋಡಿ ಸ್ಫೂರ್ತಿ ಪಡೆಯಬೇಕು. ಬರಹಗಾರರಿಗೆ ಇರುವ ಅವಕಾಶಗಳು ಇಂದು ಹೆಚ್ಚಾಗಿವೆ ಎಂದರು. ಹಿರಿಯ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿ ಸೋಮಶೇಖರ್ ವಿದ್ಯಾರ್ಥಿಗಳಿಂದ ಆಯ್ಕೆಯಾದ ಬರಹಗಳನ್ನು ತ್ರೈಮಾಸಿಕ ಸಂಚಿಕೆಯ ರೂಪದಲ್ಲಿ ಪ್ರಕಟಿಸಲಾಗುವುದು ಎಂದರು. ಸಮಾರಂಭದಲ್ಲಿ ಕಾಲೇಜಿನ ಕಛೇರಿಯ ಮ್ಯಾನೇಜರ್ ಗಂಗಣ್ಣ, ಅಧೀಕ್ಷಕರಾ ರೇಣುಕ ಪ್ರಸಾದ್, ರಸಗಂಗಾ ಸಂಚಿಕೆಯ ಸಹ ಸಂಪಾದಕ ಪ್ರೊ.ಮಲ್ಲಿಕಾರ್ಜುನಯ್ಯ, ಪ್ರೊ.ಪದ್ಮಜಾ ಮೊದಲಾದವರು ಪಾಲ್ಗೊಂಡಿದ್ದರು. ಕು.ಅರ್ಚನಾ ಪ್ರಾರ್ಥಿಸಿದರೆ, ಕು.ಭಾರತಿ ಸ್ವಾಗತಿಸಿದರು. ಕು.ನಳಿನ ವಂದಿಸಿದರು. ಕು.ರಕ್ಷಿತಾ ನಿರೂಪಿಸಿದರು.

Scanned with ACE Scanner

ಪ್ರಜಾ ಸಮತೆ
ದಿನಾಂಕ - 25/09/2019
ದಿನ :- ಬುಧವಾರ

# ಪ್ರತಿ ವಿದ್ಯಾರ್ಥಿಗೆ ಶಿಕ್ಷಣದ ಮೂಲಕ ಸಂಸ್ಕಾರ ಕೊಟ್ಟ ಶ್ರೀ ಸಿದ್ಧಗಂಗಾ ಕಾಲೇಜು: ಪ್ರೊ.ಹೆಚ್.ಕೆ.ಶಿವಲಿಂಗಸ್ವಾಮಿ



ತುಮಕೂರು: ಈ ನಾಡಿನ ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣದ ಮೂಲಕ ಸಂಸ್ಕಾರ ಮತ್ತು ಸಂಸ್ಕೃತಿ ಯನ್ನು ನೀಡಿದ ಕಾಲೇಜು ನಮ್ಮ ಶ್ರೀ ಸಿದ್ಧಗಂಗಾ ಕಾಲೇಜು,ಈ ಕಾಲೇಜಿಗೆ ಯಾರೇ ಬರಲಿ ಅವರಿಗೆ ಉತ್ತಮ ಶಿಕ್ಷಣದ ಜೊತೆ ಜೊತೆಗೆ ಆದರ್ಶಗಳು,ಜೀವನದ ಮೌಲ್ಯಗಳನ್ನು ಹೇಳಿಕೊಡುವವರು ನಮ್ಮ ಗುರುಗಳು ಅವರನ್ನು ಪ್ರತಿ ನಿತ್ಯ ಸ್ಮರಿಸಬೇಕಾದ ಕರ್ತವ್ಯ ನಮ್ಮೆಲ್ಲರ ಮೇಲಿದೆ ಎಂದು ತುಮಕೂರು ವಿಶ್ವವಿದ್ಯಾಲಯದ ಆಂಗ್ಲಭಾಷಾ ಪ್ರಾಧ್ಯಾಪಕರಾದ ಪ್ರೊ.ಹೆಚ್.ಕೆ. ಶಿವಲಿಂಗಸ್ವಾಮಿ ಹೇಳಿದರು.

ಅವರುಶ್ರೀ ಸಿದ್ಧಗಂಗಾ .ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಆಯೋಜಿಸಿದ್ದ ಹಿರಿಯ ವಿದ್ಯಾರ್ಥಿಗಳ ಸಂಘದ 16ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಇಂದು ಬಹಳಷ್ಟು ಕಾಲೇಜುಗಳು ಇರಬಹುದು ಆದರೆ ಶ್ರೀಸಿದ್ಧಗಂಗಾ ಕಾಲೇಜು ನೀಡುವ ಮೌಲ್ಯವರ್ಧಿತ ಶಿಕ್ಷಣವನ್ನು ಯಾವುದೇ ಕಾಲೇಜು ನೀಡಲು ಸಾಧ್ಯವಿಲ್ಲ ಇಲ್ಲಿ ಅಂತಹ ವಿದ್ವಾಂಸರು,ಅಧ್ಯಾಪಕರು ಇದ್ದು ಅವರಿಂದ ಕಲಿತ ಶಿಕ್ಷಣದ ಮೂಲಕ ನಾವು ಜೀವಿಸುತ್ತಿರುವುದು ನಮ್ಮ ಪುಣ್ಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಅಧ್ಯಕ್ಷ ಡಾ॥ಆರ್. ಆನಂದಕುಮಾರಿ ರವರು ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಕೊಡುಗೆ ಅಪಾರವಾದುದು,ಮಧ್ಯಾಹ್ನದ ಭೋಜನ,ಕಾಲೇಜಿನ ಫೀ ಕಟ್ಟಲು ಹಣದ ಸಹಾಯ,ಹಲವಾರು ವಿಷಯಗಳ ಸೆಮಿನಾರ್ ಗಳನ್ನು ಸಂಘದಿಂದ ಹಮ್ಮಿಕೊಂಡು ಹಾಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ. ಕಿರಿಯ ವಿದ್ಯಾರ್ಥಿಗಳಿಗೆ ಉದ್ಯೋಗದ ಮಾರ್ಗದರ್ಶನ, ಉಚಿತ ಕಾನೂನು ಸಲಹೆ, ಉಚಿತ ಡಿ.ಎಲ್. ಮಾಡಿಸಿಕೊಡುತ್ತಿರುವು ದು, ರ್‍ಯಾಂಕ್ ವಿಜೇತರಿಗೆ, ಎನ್.ಸಿ.ಸಿ .ಮತ್ತು ಎನ್.ಎಸ್. ಎಸ್.ನಲ್ಲಿ ಉತ್ತಮ ಸಾಧನೆ ಮಾ ಡಿದ ಸಾಧಕರನ್ನು ಸನ್ಮಾನಿಸುತ್ತಿ ರುವುದು ನಮಗೆಲ್ಲಾ ಹೆಮ್ಮೆಯ ವಿಚಾರವಾಗಿದೆ ಎಂದು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ವಿವಿಧ ವಿಷಯಗಳಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ, ಉತ್ತಮ ಸಾಧನೆಗೈದ ಎನ್.ಎಸ್.ಎಸ್, ಎನ್.ಸಿ.ಸಿ, ಕ್ರೀಡಾ ವಿಜೇತ ವಿದ್ಯಾರ್ಥಿಗಳನ್ನು, ರ್‍ಯಾಂಕ್ ವಿಜೇತರಿಗೆ ,ಅಂತಿಮ ಪದವಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರದ ಜೊತೆಗೆ ನಗದು ಪುರಸ್ಕಾರ ನೀಡಿ ಹಾಗೂ 25 ಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಿ ಸಂಘದ ವತಿಯಿಂದ ಗೌರವಿಸಲಾಯಿತು ಮತ್ತು ಲಿಂಗೈಕ್ಯ ಡಾ॥ಶ್ರೀ.ಶ್ರೀ ಶಿವಕುಮಾರಸ್ವಾಮಿಗಳಿಗೆ 2 ನಿಮಿಷಗಳ ಮೌನವನ್ನು ಆಚರಿಸಿ ಪುಶ್ಪಾರ್ಚನೆ ಮಾಡಿ ಶ್ರೀ ಶ್ರೀಗಳಿಗೆ ಗೌರವವನ್ನು ಸಲ್ಲಿಸಲಾಯಿತು.

Scanned with ACE Scanner

ಪ್ರಜಾ ಪ್ರಗತಿ ಸೆಪ್ಟೆಂಬರ್ 26, 2019 ಗುರುವಾರ

# ಪ್ರಕೃತಿಯನ್ನು ನಾವು ರಕ್ಷಿಸಿದರೆ ಪ್ರಕೃತಿಯು ನಮ್ಮನ್ನು ರಕ್ಷಿಸುತ್ತದೆ



ತುಮಕೂರು

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ಹಾಗೂ ಬೆಂಗಳೂರಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಓಝೋನ್ ಸಂರಕ್ಷಣಾ ದಿವಸ ಆಚರಿಸಲಾಯಿತು.

ಮೈಸೂರಿನ ಶೈಕ್ಷಣಿಕ ಸಲಹೆಗಾರ ಸತೀಶ್ ಹೆಚ್. ಎಲ್.ಓಝೋನ್ ಪದರದ ವಿನ್ಯಾಸ ಕಾರ್ಯಗಳು ಮತ್ತು ಅದರ ಸಂರಕ್ಷಣೆಯ ಬಗ್ಗೆ ಉಪನ್ಯಾಸ ನೀಡಿದರು. ಓಝೋನ್ ಪದರದ ರಚನೆಗೆ ಯಾವ ಅಂಶಗಳು ಕಾರಣವಾಗುತ್ತವೋ ಅವುಗಳ ಹೆಚ್ಚಳದಿಂದಲೇ ಓಝೋನ್ ಪದರಕ್ಕೆ ದಕ್ಕೆಯಾಗುತ್ತಿರುವುದರ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಇಂದಿನ ಪರಿಸರ ಅನಾಹುತಗಳ ಬಗ್ಗೆ ಮಾನವ ಆಧಾರಿತ ಚಟುವಟಿಕೆಗಳು ಹೇಗೆ ಕಾರಣವಾಗುತ್ತವೆಎಂಬುದನ್ನು ವಿವರಿಸಿ, ಅವುಗಳನ್ನು ತಡೆಗಟ್ಟುವಲ್ಲಿ 1987-ಮಾಂಟ್ರಿಯಲ್ ಒಪ್ಪಂದ ಕಿಗಾಲಿ ಒಪ್ಪಂದಗಳು ಮತ್ತು ತಿದ್ದುಪಡಿಗಳ ಬಗ್ಗೆ ವಿವರಣೆ ನೀಡಿ ಅವುಗಳ ಜಾಗತಿಕ ಮಟ್ಟದ ಅನುಕರಣೆ ಓಝೋನ್ ಪದರ ಸುಧಾರಿಸುತ್ತಿದೆ. ಎಂಬ 2019 ರ ಧ್ಯೇಯವಾಕ್ಯಕ್ಕೆ ಕಾರಣವಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೆಎಸ್‌ಟಿಎ ವೈಜ್ಞಾನಿಕ ಅಧಿಕಾರಿ ವಿ.ಕೆ ಶ್ರೀನಿವಾಸ್, ಉದಯೋನ್ಮುಖ ವಿಜ್ಞಾನಿಗಳಿಗೆ, ಸಂಶೋಧಕರು, ಶಿಕ್ಷಕರಿಗೆ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕೆಎಸ್‌ಟಿಎ ಆಶ್ರಯದಿಂದ ನಡೆಸುತ್ತಿರುವ ಅನೇಕ ಕಾರ್ಯಕ್ರಮಗಳ ಬಗ್ಗೆ ವಿವರಿಸಿ, ಇದರ ಪ್ರಯೋಜನಗಳನ್ನು ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಡಾ. ಆರ್ .ಜಿ ಶರತ್ಚಂದ್ರ ಅವರು, ಹವಾಮಾನ ಬದಲಾವಣೆ ಮತ್ತು ಓಝೋನ್ ಪದರದ ಬಗ್ಗೆ ಸಂಬಂಧಪಟ್ಟಂತೆ ತಾಂತ್ರಿಕ ವಿಷಯಗಳನ್ನು ವಿವರಿಸಿದರು. ಪರಿಸರದ ರಕ್ಷಣೆ ಮನುಕುಲದ ರಕ್ಷಣೆ ಈ ಧ್ಯೇಯವಾಕ್ಯದೊಂದಿಗೆ ಇಡೀ ಸಮಾರಂಭವು ಓಝೋನ್ ಪದರದ ಸಂರಕ್ಷಣೆ ಎಲ್ಲರ ಮೂಲಭೂತ ಕರ್ತವ್ಯ ಎಂಬುದನ್ನು ಮನವರಿಕೆ ಮಾಡಿತು.

ಸಂಸ್ಥೆಯ ಕಾರ್ಯದರ್ಶಿ ಟಿ.ಕೆ ನಂಜುಂಡಪ್ಪ ಮಾತನಾಡಿ, ಹೇಳುವುದು ಒಂದು ಮಾಡುವುದು ಇನ್ನೊಂದು ಆದರೆ ಪರಿಸರ ಹಾನಿಗೆ ಕೊನೆ ಎಂದು ವಿವರಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ, ಭಿತ್ತಿಚಿತ್ರ ಮತ್ತು ಚಿತ್ರಕಲಾ ಸ್ಪರ್ಧೆಗಳ ವಿಜೇತರಿಗೆ 18,000 ರೂ.ಗಳ ನಗದು ಬಹುಮಾನವಿತರಿಸಲಾಯಿತು.

ನಂತರ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ. ಆರ್. ಆನಂದಕುಮಾರಿ ವಹಿಸಿದ್ದರು. ಸಂಚಾಲಕ ಡಾ. ಶೈಲೇಶ್, ಸಹ ಸಂಚಾಲಕ ಎಂ. ಅನಿಲ್‌ಕುಮಾರ್ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

Scanned with ACE Scanner

# ಪ್ರಕೃತಿಯನ್ನು ನಾವು ರಕ್ಷಿಸಿದರೆ ಪ್ರಕೃತಿಯು ನಮ್ಮನ್ನು ರಕ್ಷಿಸುತ್ತದೆ



ತುಮಕೂರು:ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ಹಾಗೂ ಬೆಂಗಳೂರಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಓಝೋನ್ ಸಂರಕ್ಷಣಾ ದಿವಸ ಆಚರಿಸಲಾಯಿತು.

ಮೈಸೂರಿನ ಶೈಕ್ಷಣಿಕ ಸಲಹೆಗಾರ ಸತೀಶ್ ಹೆಚ್.ಎಲ್.ಓಝೋನ್ ಪದರದ ವಿನ್ಯಾಸ ಕಾರ್ಯಗಳು ಮತ್ತು ಅದರ ಸಂರಕ್ಷಣೆಯ ಬಗ್ಗೆ ಉಪನ್ಯಾಸ ನೀಡಿದರು. ಓಝೋನ್ ಪದರದ ರಚನೆಗೆ ಯಾವ ಅಂಶಗಳು ಕಾರಣವಾಗುತ್ತವೋ ಅವುಗಳ ಹೆಚ್ಚಳದಿಂದಲೇ ಓಝೋನ್ ಪದರಕ್ಕೆ ದಕ್ಕೆಯಾಗುತ್ತಿರುವುದರ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಇಂದಿನ ಪರಿಸರ ಅನಾಹುತಗಳ ಬಗ್ಗೆ ಮಾನವ ಆಧಾರಿತ ಚಟುವಟಿಕೆಗಳು ಹೇಗೆ ಕಾರಣವಾಗುತ್ತವೆಎಂಬುದನ್ನು ವಿವರಿಸಿ, ಅವುಗಳನ್ನು ತಡೆಗಟ್ಟುವಲ್ಲಿ 1987–ಮಾಂಟ್ರಿಯಲ್ ಒಪ್ಪಂದ ಕಿಗಾಲಿ ಒಪ್ಪಂದಗಳು? ಮತ್ತು ತಿದ್ದುಪಡಿಗಳ ಬಗ್ಗೆ ವಿವರಣೆ ನೀಡಿ ಅವುಗಳ ಜಾಗತಿಕ ಮಟ್ಟದ ಅನುಕರಣೆ ಓಝೋನ್ ಪದರ ಸುಧಾರಿಸುತ್ತಿದೆ ಎಂಬ 2019 ರ ಧ್ಯೇಯವಾಕ್ಯಕ್ಕೆ ಕಾರಣವಾಗಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೆಎಸ್‌ಟಿಎ ವೈಜ್ಞಾನಿಕ ಅಧಿಕಾರಿ ಎ.ಕೆ ಶ್ರೀನಿವಾಸ್, ಉದಯೋನ್ಮುಕ ವಿಜ್ಞಾನಿಗಳಿಗೆ, ಸಂಶೋಧಕರು, ಶಿಕ್ಷಕರಿಗೆ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕೆಎಸ್‌ಟಿಎ ಆಶ್ರಯದಿಂದ ನಡೆಸುತ್ತಿರುವ ಅನೇಕ ಕಾರ್ಯಕ್ರಮಗಳ ಬಗ್ಗೆ ವಿವರಿಸಿ, ಇದರ ಪ್ರಯೋಜನಗಳನ್ನು ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಡಾ. ಆರ್.ಜಿ ಶರತ್ಚಂ?ದ್ರ ಅವರು, ಹವಾಮಾನ ಬದಲಾವಣೆ ಮತ್ತು ಓಝೋನ್ ಪದರದ ಬಗ್ಗೆ ಸಂಬಂಧಪಟ್ಟಂತೆ ತಾಂತ್ರಿಕ ವಿಷಯಗಳನ್ನು ವಿವರಿಸಿದರು. ಪರಿಸರದ ರಕ್ಷಣೆ ಮನುಕುಲದ ರಕ್ಷಣೆ ಈ ಧ್ಯೇಯವಾಕ್ಯದೊಂದಿಗೆ ಇಡೀ ಸಮಾರಂಭವು ಓಝೋನ್ ಪದರದ ಸಂರಕ್ಷಣೆ ಎಲ್ಲರ ಮೂಲಭೂತ ಕರ್ತವ್ಯ ಎಂಬುದನ್ನು ಮನವರಿಕೆ ಮಾಡಿತು. ಸಂಸ್ಥೆಯ ಕಾರ್ಯದರ್ಶಿ ಟಿ.ಕೆ ನಂಜುಂಡಪ್ಪ ಮಾತನಾಡಿ, ಹೇಳುವುದು ಒಂದು ಮಾಡುವುದು ಇನ್ನೊಂದು ಆದರೆ ಪರಿಸರ ಹಾನಿಗೆ ಕೊನೆ ಎಂದು ವಿವರಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ, ಭಿತ್ತಿಚಿತ್ರ ಮತ್ತು ಚಿತ್ರಕಲಾ ಸ್ಪರ್ಧೆಗಳ ವಿಜೇತರಿಗೆ 18,000 ರೂ.ಗಳ ನಗದು ಬಹುಮಾನವಿತರಿಸಲಾಯಿತು.

ನಂತರ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ. ಆರ್. ಆನಂದಕುಮಾರಿ ವಹಿಸಿದ್ದರು. ಸಂಚಾಲಕ ಡಾ. ಶೈಲೇಶ್, ಸಹ ಸಂಚಾಲಕ ಎಂ. ಅನಿಲ್‌ಕುಮಾರ್ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

Scanned with ACE Scanner

ದಿನಾಂಕ: 30.11.2019

ದಿನ: ಶುಕ್ರವಾರ

ಪತ್ರಿಕೆ: ಪ್ರಜಾಪ್ರಗತಿ

# ಬಿ.ಸಿ.ಎ. ಪದವಿಯಲ್ಲಿ ರ್‍ಯಾಂಕ್




**ತುಮಕೂರು:** ತುಮಕೂರು ವಿಶ್ವವಿದ್ಯಾನಿಲಯದಿಂದ ಬಿ.ಸಿ.ಎ. ಪದವಿಯಲ್ಲಿ ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ವಿದ್ಯಾರ್ಥಿನಿಯರಾದ ಎಂ.ಜೆ.ದೇವಿಕ ಪ್ರಥಮ ರ್‍ಯಾಂಕ್ ಮತ್ತು ಎಂ.ಡಿ. ಮೇದಿನಿ ದ್ವಿತೀಯ ರ್‍ಯಾಂಕ್ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಇವರನ್ನು ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಅಭಿನಂದಿಸಿದ್ದಾರೆ.

Scanned with ACE Scanner

ದಿನಾಂಕ: 21-02-2019
ದಿನ: ಗುರುವಾರ
ದಿನಪತ್ರಿಕೆ:- ವಿಜಯ ಕರ್ನಾಟಕ.

# ಸಿದ್ಧಗಂಗಾ ಶ್ರೀ ಹುಟ್ಟುಹಬ್ಬ: ರಕ್ತದಾನ



ತುಮಕೂರಿನ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ವಿದ್ಯಾರ್ಥಿಗಳು ಡಾ.ಶಿವಕುಮಾರ ಸ್ವಾಮೀಜಿ ಅವರ 112ನೇ ಹುಟ್ಟುಹಬ್ಬದ ಸ್ಮರಣಾರ್ಥ ಸ್ವಯಂಪ್ರೇರಿತರಾಗಿ ರಕದಾನ ನೀಡಿ ತಮ್ಮ ಸೇವಾ ಮನೋಭಾವ ಮೆರೆದರು.

**ವಿಕ ಸುದ್ದಿಲೋಕ** ತುಮಕೂರು

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸ್ವಯಂಪ್ರೇರಿತ ರಾಗಿ ಡಾ.ಶ್ರೀ ಶಿವಕುಮಾರ ಮಹಾಸ್ವಾಮೀಜಿ ಅವರ 112ನೇ ಹುಟ್ಟುಹಬ್ಬದ ಸ್ಮರಣಾರ್ಥ ಸುಮಾರು 163 ಯುನಿಟ್‌ಗಳಷ್ಟು ರಕ್ತ ನೀಡಿ ತಮ್ಮ ಸೇವಾ ಮನೋಭಾವ ಮೆರೆದರು.

ಬೆಂಗಳೂರಿನ ಸ್ವಾಮಿ ವಿವೇಕಾನಂದ ಸ್ವಯಂಪ್ರೇರಿತ ರಕ್ತನಿಧಿ ಕೇಂದ್ರದ ಸಹಯೋಗದೊಂದಿಗೆ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ರಕ್ತದಾನ ಶಿಬಿರದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ನೀಡಿದ ರಕ್ತವನ್ನು ಸಂಗ್ರಹಿಸಿ ಕಿದ್ವಾಯಿ ಸ್ಮಾರಕ ಗ್ರಂಥಿ ಆಸ್ಪತ್ರೆಗೆ ನೀಡಲಾಯಿತು.

ಐಕ್ಯೂಎಸಿ ಸಂಯೋಜಕ ಪ್ರೊ.ಸಿ.ಎಸ್.ಸೋಮಶೇಖರ್ ಮಾತನಾಡಿ, 'ರಕ್ತದಾನ ಮಾಡುವುದರಿಂದ ಆರೋಗ್ಯ ಚೆನ್ನಾಗಿರುತ್ತದೆ. ಹೊಸ ರಕ್ತದ ಕಣಗಳು ನಮ್ಮ ದೇಹದಲ್ಲಿ ಬೇಗ ಉತ್ಪತ್ತಿಯಾಗುತ್ತವೆ. ತಾವು ಎನ್‌ಸಿಸಿ ಅಧಿಕಾರಿಗಳಾಗುವುದಕ್ಕಿಂತ ಮೊದಲಿನಿಂದಲೂ ಅಂದರೆ ದ್ವಿತೀಯ ಬಿಎಸ್‌ಸಿ ಓದುತ್ತಿರುವಾಗಿನಿಂದಲೂ ರಕ್ತದಾನ ಮಾಡುತ್ತಿದ್ದೇನೆ. ಈಗಾಗಲೇ 24 ಬಾರಿ ರಕ್ತದಾನ ಮಾಡಿದ್ದೇನೆ' ಎಂದು ತಿಳಿಸಿದರು.

ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ರಾಮಲಿಂಗಾರೆಡ್ಡಿ ಮಾತನಾಡಿ, ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ರಕ್ತದಾನದಲ್ಲಿ ಭಾಗವಹಿಸಿ ಸೇವಾ ತತ್ಪರತೆ ಮೆರೆಯುತ್ತಿದ್ದಾರೆ. ಇದು ವಿದ್ಯಾರ್ಥಿಗಳಲ್ಲಿ ಸಮಾಜ ಸೇವೆ-ದೇಶ ಸೇವೆಗೆ ಸದಾ ಸಿದ್ಧ ಎಂಬುದನ್ನು ತೋರಿಸುತ್ತದೆ ಎಂದರು.

ಪ್ರಿನ್ಸಿಪಾಲ್ ಡಾ.ಆನಂದಕುಮಾರಿ ಮಾತನಾಡಿದರು. ಕಾಲೇಜಿನ ಪ್ರತಿನಿಧಿಗಳೊಂದಿಗೆ ಸ್ವಾಮಿ ವಿವೇಕಾನಂದ ಸ್ವಯಂಪ್ರೇರಿತ ರಕ್ತ ಕೇಂದ್ರ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಗೆ ಸಂಗ್ರಹಿಸಿದ ರಕ್ತವನ್ನು ನೀಡಲಾಯಿತು. ಶಿಬಿರದಲ್ಲಿ ಸ್ವಾಮಿ ವಿವೇಕಾನಂದ ಸ್ವಯಂಸೇವಕ ವೈದ್ಯ ಡಾ.ಲೋಹಿತ್, ರೆಡ್ ಕ್ರಾಸ್ ಕಾರ್ಯಕ್ರಮಾಧಿಕಾರಿ ಕುಮಾರಸ್ವಾಮಿ, ಶೃತಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Scanned with ACE Scanner

ದಿನಾಂಕ: 25/02/2019
ದಿನ: ಸೋಮವಾರ
ಪತ್ರಿಕೆ: ಪ್ರಜಾಪ್ರಗತಿ.

# ಬಿಎಂಶ್ರೀ ಕನ್ನಡ ಸಂಘದಿಂದ ಕಾರ್ಯಕ್ರಮ

ತುಮಕೂರು

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಕನ್ನಡ ವಿಭಾಗದ ಬಿ.ಎಂ.ಶ್ರೀ ಕನ್ನಡ ಸಂಘದ ವತಿಯಿಂದ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ತಿಪಟೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹ ಪ್ರಾಧ್ಯಾಪಕ ಡಾ.ಎಲ್.ಎಂ.ವೆಂಕಟೇಶ್ ಅನ್ಯಶಿಸ್ತೀಯ ಅಧ್ಯಯನ ಮತ್ತು ಪ್ರಾಯೋಗಿಕ ವಿಮರ್ಶೆ ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.



ದ್ವಿತೀಯ ಪಿಯುಸಿ ಬಿ.ಎ. ಐಚ್ಛಿಕ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಪ್ರಾಯೋಗಿಕ ವಿಮರ್ಶೆ ಎಂಬ ವಿಷಯವಾಗಿ ಮಾತನಾಡಿ ಕೃತಿಯು ಕವಿಯ ಆಳವಾದ ಅನುಭವದ ವಿಶೇಷದಿಂದ ಬಂದಿರುವ ಪಾಕ. ವಿಮರ್ಶೆ ವೈಯಕ್ತಿಕವಾಗಿರದೆ ಸಾರ್ವತ್ರಿಕವಾಗಿದ್ದು, ಕೃತಿಗೆ ನ್ಯಾಯವನ್ನು ಒದಗಿಸುವಂತಾದ್ದಾಗಿದೆ. ಬೇಂದ್ರೆಯವರ ಕುರುಡು ಕಾಂಚಾಣ, ಕುವೆಂಪುರವರ ಕಲ್ಕಿ ಗೋಪಾಲಕೃಷ್ಣ ಅಡಿಗರ ಭೂತ ಕವಿತೆಗಳನ್ನು ಪ್ರಾಯೋಗಿಕವಾಗಿ ವಿಮರ್ಶೆಗೆ ಒಳಪಡಿಸಿದರು.

ತೃತೀಯ ಬಿ.ಎ. ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗೆ ಅನ್ಯಶಿಸ್ತೀಯ ಅಧ್ಯಯನ ವಿಷಯವನ್ನು ಕುರಿತು ತೌಲನಿಕ ಅಧ್ಯಯನವಾದ ಮಹತ್ವ ಮತ್ತು ವಿಧಾನಗಳನ್ನು ವಿಶ್ಲೇಷಿಸಿದರು. ಸಾಹಿತ್ಯ ಮತ್ತು ರಾಜಕೀಯ ಪರಂಪರೆ ಮತ್ತು ಸಾಹಿತ್ಯ, ಇವುಗಳ ನಡುವಿನ ಅಂತರ್ ಸಂಬಂಧಗಳನ್ನು ಕನ್ನಡ ಸಾಹಿತ್ಯದ ನಾಡೋಜ ಪಂಪ ಕವಿಯ ಕಾವ್ಯಗಳನ್ನೊಳಗೊಂಡು ಪ್ರಸ್ತುತ ಜಾಗತಿಕರಣದ ನೆಲೆಗಳನ್ನು ವಿಶ್ಲೇಷಣೆಗೆ ಒಳಪಡಿಸಿದರು. ವಿಶೇಷ ಉಪನ್ಯಾಸಕ್ಕೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳಿಂದ ಸಂವಾದವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ.ಆರ್. ಆನಂದಕುಮಾರಿ ವಹಿಸಿದ್ದರು. ವಿದ್ಯಾರ್ಥಿನಿ ಪಲ್ಲವಿ ಪ್ರಾರ್ಥಿಸಿದರೆ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಎಸ್.ಮಂಜುಳ ಸ್ವಾಗತಿಸಿದರು. ಪ್ರೊ.ಕಂಚೀರಾಯಪ್ಪ ಉಪನ್ಯಾಸಕರನ್ನು ಪರಿಚಯಿಸಿದರು. ಕಾರ್ಯಕ್ರಮದಲ್ಲಿ ವಿಭಾಗದ ಉಪನ್ಯಾಸಕರು ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಪ್ರೊ.ಲೀಲಾವತಿ ವಂದಿಸಿದರು. ಪ್ರೊ.ಎಲ್.ಎಸ್. ಮಲ್ಲಿಕಾರ್ಜುನಯ್ಯ ನಿರೂಪಿಸಿದರು.

Scanned with ACE Scanner

ವಿಜಯ ಕರ್ನಾಟಕ VK



## ಶ್ರೀಗಳ ಹಾದಿ

### ಇಪ್ಪತ್ತು ಮತ್ತು ಇಪ್ಪತ್ತೊಂದನೇ ಶತಮಾನದ ಪ್ರಮುಖ ಸಾಕ್ಷಿಪ್ರಜ್ಞೆಯಾಗಿರುವ ಸಿದ್ಧಗಂಗಾ ಶ್ರೀಗಳ ಜೀವನ ಹಾಗೂ ಸಾಧನಾ ಪಥ



**ಜನನ: 1.04.1908**
ರಾಮನಗರ ಜಿಲ್ಲೆ ಮಾಗಡಿ ತಾಲೂಕು ವೀರಾಪುರದಲ್ಲಿ ಪಟೇಲ್ ಹೊನ್ನಪ್ಪ ಮತ್ತು ಗಂಗಮ್ಮ ದಂಪತಿಯ 13ನೇ ಸುಪುತ್ರರಾಗಿ ಜನನ.

**ಪೂರ್ವಾಶ್ರಮದ ಹೆಸರು:** ಶಿವಣ್ಣ

**ವಿದ್ಯಾಭ್ಯಾಸ:** 1912-13ರಲ್ಲಿ ಕೂಲಿಮಠ, ವೀರಾಪುರ. 1914ರಿಂದ 1921ರ ವರೆಗೆ ಪ್ರಾಥಮಿಕ-ಮಾಧ್ಯಮಿಕ ಅಭ್ಯಾಸ, ಎ.ವಿ.ಸ್ಕೂಲ್, ನಾಗವಲ್ಲಿ, ತುಮಕೂರು. 1922ರಿಂದ 1924ರವರೆಗೆ ಸರಕಾರಿ ಪ್ರೌಢಶಾಲೆ, ತುಮಕೂರು. 1925ರಿಂದ 1926ರ ವರೆಗೆ ಸರಕಾರಿ ಎಂಟ್ರೆನ್ಸ್ ಕಾಲೇಜು, 1927ರಿಂದ 1930ರವರೆಗೆ ಸರಕಾರಿ ಸೆಂಟ್ರಲ್ ಕಾಲೇಜು. ಬೆಂಗಳೂರಿನಲ್ಲಿ ಪದವಿ.

**ಅಭ್ಯಾಸ ಕಾಲದಲ್ಲಿ ವಾಸ್ತವ್ಯ:** ನಾಗವಲ್ಲಿಯ ಸಹೋದರಿ ಮನೆ, ತುಮಕೂರಿನ ಚಿಕ್ಕಪೇಟೆಯಲ್ಲಿ ಬಾಡಿಗೆ ಕೊಠಡಿ. 1927ರಲ್ಲಿ 4 ತಿಂಗಳು ಮಠದಲ್ಲಿ ವಾಸ್ತವ್ಯ ಹಾಗೂ ಬೆಂಗಳೂರಿನ ಗುಬ್ಬಿ ತೋಟದಪ್ಪ ವಿದ್ಯಾರ್ಥಿ ನಿಲಯ.

**16.01.1930:** ಮಠದ ಕಿರಿಯ ಶ್ರೀಗಳಾಗಿದ್ದ ಮರುಳಾರಾಧ್ಯ ಸ್ವಾಮಿಗಳ ಸಮಾಧಿಕ್ರಿಯೆಗೆ ಬಂದಾಗ ಉದ್ದಾನ ಶಿವಯೋಗಿಗಳ ಕೃಪಾದೃಷ್ಟಿಗೊಳಗಾಗಿದ್ದು.

**03.03.1930** ಶ್ರೀ ಸಿದ್ಧಗಂಗಾ ಮಠದ ಉತ್ತರಾಧಿಕಾರ ಸ್ವೀಕಾರ. ಡಾ.ಶಿವಕುಮಾರ ಸ್ವಾಮೀಜಿಯಾಗಿ ನೂತನ ಅಭಿದಾನ.

**1937-38:** ಉದ್ದಾನ ಶಿವಯೋಗಿಗಳು ಸ್ಥಾಪಿಸಿದ ಸಂಸ್ಕೃತ ಪಾಠಶಾಲೆಯನ್ನು ಕಾಲೇಜಾಗಿ ಪರಿವರ್ತಿಸಿದರು.

**11.01.1941:** ಉದ್ದಾನ ಶಿವಯೋಗಿಗಳ ಲಿಂಗೈಕ್ಯಾ ನಂತರ ಸಿದ್ಧಗಂಗಾ ಮಠದ ಅಧ್ಯಕ್ಷರಾಗಿ ಪೂರ್ಣಾಧಿಕಾರ ಸ್ವೀಕಾರ.

**1944:** ತುಮಕೂರು ನಗರದಲ್ಲಿ ಸಿದ್ಧಗಂಗಾ ಪ್ರೌಢಶಾಲೆ ಪ್ರಾರಂಭಿಸಿದರು.

**18.06.1949:** ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜಿನ ರಜತ ಮಹೋತ್ಸವ.

**1954:** ಶ್ರೀ ಕ್ಷೇತ್ರದ ಹಳೆಯ ವಿದ್ಯಾರ್ಥಿ ಸಂಘ ಸ್ಥಾಪನೆ.

**1955:** ಶ್ರೀ ಕ್ಷೇತ್ರದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಪ್ರೌಢಶಾಲೆ ಸ್ಥಾಪಿಸಿದರು.

**1962:** ಸಿದ್ಧಗಂಗಾ ವಿದ್ಯಾಸಂಸ್ಥೆ ಸ್ಥಾಪಿಸಿದರು.

**1963:** ಶಿವರಾತ್ರಿ ಜಾತ್ರಾ ವೇಳೆ ಕೃಷಿ ಮತ್ತು ಕೈಗಾರಿಕಾ ವಸ್ತುಪ್ರದರ್ಶನ.

**19.06.1963:** ಜಿಲ್ಲೆಯ ಪ್ರಥಮ ಎಂಜಿನಿಯರಿಂಗ್ ಕಾಲೇಜು ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯ ಆರಂಭ.

**28.12.1963:** 44ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಸಿದ್ಧಗಂಗಾ ಮಠದಲ್ಲಿ ಶ್ರೀಗಳ ನೇತೃತ್ವದಲ್ಲಿ ರಂ.ಶ್ರೀ.ಮುಗುಳಿ ಅಧ್ಯಕ್ಷತೆಯಲ್ಲಿ ವ್ಯವಸ್ಥಾಪನೆ.

**1965:** ಕನ್ನಡ ಪಂಡಿತ ಕಾಲೇಜು ಸ್ಥಾಪನೆ. ಪ್ರಸಕ್ತ ರಾಜ್ಯದ ಏಕೈಕ ಬಿ.ಎ. ಇಂಟಿಗ್ರೇಟೆಡ್ ಕಾಲೇಜಾಗಿ ಮೇಲ್ದರ್ಜೆಗೆ.

**14.01.1965:** ಸಿದ್ಧಗಂಗಾ ತ್ರೈಮಾಸಿಕ ಪತ್ರಿಕೆ ಹಳೆಯ ವಿದ್ಯಾರ್ಥಿ ಸಂಘದ ಮೂಲಕ ಸ್ಥಾಪನೆಗೆ ಪ್ರೇರಣೆ.

**06.11.1965** ಧಾರವಾಡ ಕರ್ನಾಟಕ ವಿವಿಯಿಂದ ಗೌರವ ಡಾಕ್ಟರೇಟ್ ಪದವಿ.

**1965:** ಸಿದ್ಧಗಂಗಾ ಸಂಜೆ ಕಾಲೇಜು ಸ್ಥಾಪನೆ.

**16.06.1966:** ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜು ಸ್ಥಾಪನೆ.

**02.06.1969:** ಶ್ರೀಗಳಿಂದ ಬೊಂಬಾಯಿಯಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಧಿವೇಶನದ ಅಧ್ಯಕ್ಷತೆ.

**26.05.1972:** ರಜತ ಮಹೋತ್ಸವ ಕಟ್ಟಡ ಉದ್ಘಾಟನೆ.

**1978-79:** ಗ್ರಾಮಾಂತರ ಬಸವ ಜಯಂತಿ ಯೋಜನೆ.

**24.04.1982:** ಪೀಠಾರೋಹಣ ಸುವರ್ಣ ಮಹೋತ್ಸವ.

**31.03.1988:** ಶ್ರೀ ಸಿದ್ಧಲಿಂಗ ಸ್ವಾಮೀಜಿಯವರನ್ನು ಉತ್ತರಾಧಿಕಾರಿಯಾಗಿ ನೇಮಕ ಮಾಡಿದ್ದು.

**22.04.1997:** ಪೀಠಾರೋಹಣ ವಜ್ರಮಹೋತ್ಸವ

**25.04.2005:** ಪಟ್ಟಾಧಿಕಾರದ ಅಮೃತ ಮಹೋತ್ಸವ.

**01.04.2007** ರಾಜ್ಯ ಸರಕಾರದ ಪ್ರತಿಷ್ಠಿತ ಕರ್ನಾಟಕ ರತ್ನ ಪುರಸ್ಕಾರ, ತುಮಕೂರು ವಿವಿಯಿಂದ ಗೌರವ ಡಾಕ್ಟರೇಟ್.

**02.02.2009:** ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ ಶತಮಾನೋತ್ಸವ ಸಮಾರಂಭ.

**01.04.2010:** ಕರ್ನಾಟಕ ಸರಕಾರದಿಂದ ಬಸವ ಶ್ರೀ ಪುರಸ್ಕಾರಕ್ಕೆ ಭಾಜನ.

**04.08.2011:** ಶ್ರೀ ಸಿದ್ಧಲಿಂಗ ಸ್ವಾಮೀಜಿ ಅವರಿಗೆ ಶ್ರೀ ಮಠದ ಅಧ್ಯಕ್ಷ ಪದವಿ ಹಸ್ತಾಂತರಿಸಿದರು.

**03.03.2013:** ಪಟ್ಟಾಧಿಕಾರವಾಗಿ 80ನೇ ವರ್ಷದ ಅಮೃತ ಮಹೋತ್ಸವ.

**13.05.2015** ಭಾರತ ಸರಕಾರದಿಂದ ಪದ್ಮಭೂಷಣ ಪ್ರಶಸ್ತಿಯ ಗೌರವ



# ಈ ಶತಮಾನದ ಅಚ್ಚರಿ ಶಿವಕುಮಾರ ಶ್ರೀ

ಗುರುಗಳು ನೂರಾರು ಸಂಖ್ಯೆಯಲ್ಲಿ ಇರುವಂತೆ ಗುರುವಂದನೆಯ ಕಾರ್ಯಕ್ರಮಗಳೂ ನೂರಾರು ನಡೆಯಬಹುದು. ಆದರೆ ಉಳಿದ ಗುರುವಂದನೆಯೇ ಬೇರೆ: ನೂರೊಂಬತ್ತನೇ ವರ್ಷದ ನೀರಾಂಜನ ಬೆಳಗುತ್ತಿರುವ ಸಿದ್ಧಗಂಗಾ ಸ್ವಾಮೀಜಿ ಅವರಿಗೆ ನಮ್ಮ ಭಕ್ತಿ ಗೌರವಗಳನ್ನು ಅರ್ಪಿಸುವುದೇ ಬೇರೆ. ಈ ಮೂಲಕ, ಸಿದ್ಧಗಂಗಾ ಕ್ಷೇತ್ರದಲ್ಲಿ ಆಶ್ರಯ ಪಡೆದಿರುವ ಸಹಸ್ರ ಸಹಸ್ರ ಸಂಖ್ಯೆಯ ವಿದ್ಯಾರ್ಥಿಗಳಿಗಾಗಿ ನಡೆಯುತ್ತಿರುವ ಜ್ಞಾನಾನ್ನ ದಾಸೋಹಕ್ಕೆ ನೆರವಾಗಿರುವ ಶ್ರೀಮಠದ ಸಮಸ್ತ ಭಕ್ತ ಸಮುದಾಯಕ್ಕೆ ಕೃತಜ್ಞತೆ ಸಲ್ಲಿಸುತ್ತಿದ್ದೇವೆ.

ಮಾನವೀಯ ಸಂಬಂಧಗಳೇ ನುಚ್ಚು ನೂರಾಗುತ್ತಿರುವ ಇಂದಿನ ವಿಷಾದನೀಯ ಸನ್ನಿವೇಶದಲ್ಲಿ ಮಾನವೀಯ ಸೇವೆಯೇ ಮಹಾದೇವನ ಪೂ[illegible]ಂದು ಭಾವಿಸಿರು[illegible] ಸಿದ್ಧಗಂಗಾ ಕ್ಷೇತ್ರದ ಪರಿಚಯವನ್ನು [illegible]ಸದಾಗಿ ಮಾಡಿಕೊ[illegible]ವ ಅಗತ್ಯವಿದೆ ಎಂದು ಭಾವಿಸಿಲ್ಲ. ಅದೀಗ ದೇಶದೇಶಗಳಲ್ಲಿ ಪರಿಚಿತವಾಗಿರುವ ಪುಣ್ಯಕ್ಷೇತ್ರ.

ಇಲ್ಲಿಗೆ ಸುಮಾರು 115 ವರ್ಷಗಳ ಹಿಂದೆ ಪರ್ಲ್‌ಬಕ್ ಎಂಬ ಒಬ್ಬ ವಿಚಾರವಾದಿ ಹೇಳಿರುವ ಮಾತೊಂದಿದೆ: ಈ ಭೂಮಿ ಮತ್ತು ಅದರ ಮೇಲಿರುವ ನನ್ನ ಬದುಕಿನಲ್ಲಿ ನಾನು ಎಷ್ಟು ಮುಳುಗಿದ್ದೇನೆಂದರೆ, ಸ್ವರ್ಗ ಮತ್ತು ದೇವತೆಗಳ ಬಗೆಗೆ ಯೋಚನೆ ಮಾಡಲೂ ಸಾಧ್ಯವಿಲ್ಲದಷ್ಟು ಎಂದಿದ್ದಾನೆ. ಅದರಂತೆ ಈ ಲೋಕದ ಬಡ ಮಕ್ಕಳಿಗೊಂದು ಭರವಸೆಯ ಭವಿಷ್ಯವನ್ನು ರೂಪಿಸುವ ಮಹಾಮಣಿಹದಲ್ಲಿ ಕಳೆದ 85 ವರ್ಷಗಳಿಂದ ಸಂಪೂರ್ಣವಾಗಿ ಮುಳುಗಿರುವ ದಿವ್ಯ ಚೇತನ ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳ ಅನನ್ಯ ಸೇವೆ ನೆನೆಯುವ ಒಂದು ಅನನ್ಯ ಕಾರ್ಯಕ್ರಮ ಈ ಗುರುವಂದನೆ.

ನಮ್ಮಲ್ಲಿ ಧರ್ಮಗುರುಗಳಿಗೆ ಕೊರತೆಯಿಲ್ಲ. ಆದರೆ ವಾಸ್ತವ ಕೊರತೆ ಇರುವುದು ಪ್ರಜ್ಞಾವಂತ ಗುರುಗಳದ್ದು, ಅರಿವಿನ ಗುರುಗಳದ್ದು; ಅನುಭಾವದ ಗುರುಗಳದ್ದು; ಆಧ್ಯಾತ್ಮದ ಗುರುಗಳದ್ದು. ಈ ಕೊರತೆ ತುಂಬಿರುವ ಮತ್ತು ಧರ್ಮಗುರುಗಳು ಹೇಗಿರಬೇಕು ಎಂಬುದಕ್ಕೆ ನಿದರ್ಶನವಾಗಿ, ಜೀವಂತ ಸಾಕ್ಷಿಯಾಗಿ ಇರುವ ಪೂಜ್ಯ ಸಿದ್ಧಗಂಗಾ ಶ್ರೀಗಳು ನಮ್ಮ ಮುಂದಿದ್ದಾರೆ. ಅವರು ನಮ್ಮಂತಹ [illegible]ರ ಮಧ್ಯೆ ಇದ್ದ[illegible]ಲೋಕದ ಎಲ್ಲ ಹಂಗುಗಳನ್ನು ನುಂಗಿದ ಮಹಾಲಿಂಗ ಸ್ವರೂಪಿಗಳಾಗಿದ್ದಾರೆ.

ಸಿದ್ಧಗಂಗಾ ಧರ್ಮಕ್ರಾಂತಿಯ ಒಂದು ದಿವ್ಯಕ್ಷೇತ್ರ. ಪರಂಪರೆಯ ಪುಣ್ಯಕ್ಷೇತ್ರ. 12ನೇ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಕ್ರಾಂತಿಯ ಕಿಡಿ ಹಾರಿದ ವೀರಭೂಮಿ.

ನಿಸರ್ಗ ಸುಂದರ ಪರಿಸರದಲ್ಲಿರುವ ಸಿದ್ಧಗಂಗಾ ಮಠದ ಸಂಸ್ಥಾಪಕರು ಶೂನ್ಯಸಿಂಹಾಸನ ಪರಂಪರೆಯ ಗೋಸಲ ಸಿದ್ಧೇಶ್ವರರು. 14ನೇ ಶತಮಾನದಲ್ಲಿ ಆರಂಭವಾದ ಈ ಕ್ಷೇತ್ರದ ಚಟುವಟಿಕೆಗಳು ಪ್ರಸಿದ್ಧಿಗೆ ಬಂದುದು ತೋಂಟದ ಸಿದ್ಧಲಿಂಗೇಶ್ವರರ ಕಾಲದಲ್ಲಿ. ಈ ಕ್ಷೇತ್ರದೊಡನೆ ಐತಿಹಾಸಿಕ ಸಂಬಂಧವಿರುವ ಯಾತ್ರಿಕರ ಪುಣ್ಯಧಾಮ ಶಿವಗಂಗಾ ಬೆಟ್ಟ, ಶಿವಯೋಗಿಗಳ ಸಿದ್ಧರಬೆಟ್ಟ, ಪ್ರಖ್ಯಾತ ಉದ್ದಾನ ವೀರಭದ್ರ, ರಾಮದೇವರ ಬೆಟ್ಟ, ಹೀಗೆ ಸುಂದರ ಬೆಟ್ಟಗುಡ್ಡಗಳು ಅಲ್ಲಿ ನಡೆದ ಧರ್ಮಕ್ರಾಂತಿಗೆ ಸಾಕ್ಷಿ ಹೇಳುವಂತಿವೆ.

ಸಿದ್ಧಗಂಗಾ ಕ್ಷೇತ್ರಕ್ಕೆ ಭಕ್ತಿಯ ಭಸ್ಮ ಲೇಪಿಸಿದವರು ಪೂಜ್ಯ ಶ್ರೀ ಅಟವೀ ಸ್ವಾಮಿಗಳು. ಸಿದ್ಧಿಯ ಪುಷ್ಪ ಮುಡಿಸಿದವರು ಶ್ರೀ ಉದ್ದಾನ ಶಿವಯೋಗಿಗಳು. ಉದ್ದಾನ ಶಿವಯೋಗಿಗಳ ಕರಕಮಲ ಸಂಜಾತರಾಗಿ 1930ರಲ್ಲಿ ಶ್ರೀ ಸಿದ್ಧಗಂಗಾ ಮಠದ ನಿರಂಜನ ಪಟ್ಟಾಧಿಕಾರ ಸ್ವೀಕರಿಸಿದವರು ಪರಮ ತೇಜೋಮೂರ್ತಿಗಳಾದ ಪೂಜ್ಯ ಡಾ.ಶ್ರೀ ಶಿವಕುಮಾರ ಸ್ವಾಮಿಗಳು.

ಉದ್ದಾನ ಶಿವಯೋಗಿಗಳ ಶುದ್ಧ ಸಂಕಲ್ಪಕ್ಕೆ ಅನುಗುಣವಾಗಿ ಸಿದ್ಧಗಂಗಾ ಕ್ಷೇತ್ರವನ್ನು ಭಕ್ತಿ, ಜ್ಞಾನ ಮತ್ತು ಅನ್ನದಾಸೋಹದ ಮಹಾಮನೆಯನ್ನಾಗಿ ಬೆಳೆಸಿರುವ ಶ್ರೀ ಶಿವಕುಮಾರ ಸ್ವಾಮಿಗಳ ಇಷ್ಟಲಿಂಗ ಪೂಜಾ ಫಲದಿಂದಾಗಿ ಈಗ ಸಿದ್ಧಗಂಗಾ ವಿಶ್ವವಿಖ್ಯಾತ ಬೃಹತ್ ಶೈಕ್ಷಣಿಕ ಕೇಂದ್ರವಾಗಿದೆ. ಪ್ರತಿ ವರ್ಷ ಶಾಲಾ ಪ್ರವೇಶಕ್ಕಾಗಿ ಅಲ್ಲಿಗೆ ಗ್ರಾಮೀಣ ಮಕ್ಕಳ ಜೇನುಯಾತ್ರೆಯೇ ನಡೆದಿರುತ್ತದೆ.

ಕ್ರಮವಾದ ಪಾಠ ಪ್ರವಚನಕ್ಕೆ ಅಲ್ಲಿ ಆದ್ಯ ಗಮನ. ಜಾತಿ ಭೇದವಿಲ್ಲದೆ ಎಲ್ಲ ಜನಾಂಗಗಳ ಮಕ್ಕಳಿಗೂ ಸಮಾನ ಅವಕಾಶ. ಸಾಮೂಹಿಕ ಜೀವನಾನುಭವ. ಪ್ರತಿ ಮುಂಜಾನೆ ಸ್ವತಃ ಶ್ರೀಗಳ ಬೋಧನೆ ಒಂದು ವಿಶಿಷ್ಟ ಕ್ರಮ.

ಸಿದ್ಧಗಂಗಾ ಮಠದಲ್ಲಿ ಪ್ರತಿನಿತ್ಯ ಒಂಬತ್ತು ಸಾವಿರ ಮಕ್ಕಳಿಗೆ ಉಚಿತ ಅನ್ನದಾನ, ಸಹಶಿಕ್ಷಣ, ಸಹಭೋಜನ, ಜತೆಗೆ ನಿತ್ಯ ಅಲ್ಲಿಗೆ ಬರುವ ಸಾವಿರಕ್ಕೂ ಹೆಚ್ಚು ಯಾತ್ರಾರ್ಥಿಗಳಿಗೆ ದಾಸೋಹ ಸೇವೆ. ದಾಸೋಹದ ಮನೆಗೆ ಭಕ್ತರು ಬಂದು ತಮ್ಮ ಪಾಲಿನ ಅಳಿಲು ಸೇವೆ ಸಲ್ಲಿಸುವುದಂತೂ ಊಹೆಗೂ ನಿಲುಕದ್ದು. ಬಡ ರೈತರೂ ಸಹ ತಾವು ಬೆಳೆದದ್ದರಲ್ಲಿ ಒಂದಿನಿತು ಭಾಗವಾದರೂ ದಾಸೋಹದ ಕೊಪ್ಪರಿಗೆಗೆ ಸೇರಬೇಕೆಂದು ಕಾಣಿಕೆಯಂತೆ ಅರ್ಪಿಸುತ್ತಾರೆ. ಪ್ರತಿ ನಿತ್ಯ ಹತ್ತು-ಹನ್ನೊಂದು ಸಾವಿರ ಜನರಿಗೆ ಅಷ್ಟು ಪ್ರಮಾಣದ ದಾಸೋಹ ಸೇವೆ ನಡೆಯುವುದು ನಿಜಕ್ಕೂ ಒಂದು ಪವಾಡವೇ ಸರಿ. ಶ್ರೀಮಠದ ಮುಂಭಾಗದಲ್ಲಿ ಬಿದ್ದಿರುವ ಕಟ್ಟಿಗೆಯ ರಾಶಿ ತಾನು ಉರಿದು ಸಹಸ್ರಾರು ಮಕ್ಕಳಿಗೆ ಪ್ರಸಾದ ಅಣಿಮಾಡಿ ಪ್ರಸನ್ನತೆ ನೀಡುತ್ತದೆ.

ಲಿಂಗೈಕ್ಯ ಅಟವೀ ಸ್ವಾಮಿಗಳ ಶುದ್ಧ ಸಂಕಲ್ಪ; ಶ್ರೀ ಸಿದ್ಧಲಿಂಗೇಶ್ವರರ ದಿವ್ಯ ಕಾರುಣ್ಯ, ನೂರು ವರ್ಷಗಳ ಹಿಂದೆ ಹತ್ತಿಸಿದ ಸಿದ್ಧಗಂಗಾ ಅಡುಗೆ ಒಲೆಯ ಬೆಂಕಿ ಒಂದು ದಿನವೂ ಆರಿಲ್ಲ! ಅದು ಬರಿಯ ಒಣ ಸೌದೆಯ ಉರಿಯಲ್ಲ; ಮಹಾ ತಪಸ್ವಿಗಳ ಸತ್ಸಂಕಲ್ಪದ ನಿತ್ಯಜ್ಯೋತಿ!

ಆನು ಆರಂಭ ಮಾಡುವೆನಯ್ಯಾ ಗುರುಪೂಜೆಗೆಂದು, ಲಿಂಗಪೂಜೆಗೆಂದು, ಜಂಗಮ ದಾಸೋಹಕ್ಕೆಂದು ಎನ್ನುವ ಶರಣವಾಣಿ ಅಲ್ಲಿ ಸಾರ್ಥಕವಾಗಿದೆ. ಸಿದ್ಧಗಂಗಾ ಕ್ಷೇತ್ರ ಧಾರ್ಮಿಕ ಮಠಮಾನ್ಯಗಳ ವಟುಗಳಿಗೆ ತರಬೇತಿ ಕೇಂದ್ರವೂ ಹೌದು. ಕ್ಷೇತ್ರದ ಆಡಳಿತ ಮತ್ತು ಪತ್ರ ವ್ಯವಹಾರ ನಿರ್ವಹಣೆಗೆ ಕ್ರಮವಾದ ಕಾರ್ಯಾಲಯ ವ್ಯವಸ್ಥೆಯಿದೆ. ಶ್ರೀ ಕ್ಷೇತ್ರಕ್ಕೆ ಬರುವ ಭಕ್ತಾದಿಗಳ ಕಷ್ಟ-ಸುಖಗಳ ವಿಚಾರಣೆಯನ್ನು ಶ್ರೀಗಳೇ ನೋಡಿಕೊಳ್ಳುತ್ತಾರೆ. ಅವರ ಸಮಾಧಾನದ ನುಡಿಗಳು ನೊಂದವರಿಗೆ ತಂದುಕೊಡುವ ನೆಮ್ಮದಿ ಅನಿರ್ವಚನೀಯ.

ಸಿದ್ಧಗಂಗಾ ಕ್ಷೇತ್ರದ ಒಂದು ಮಹತ್ವಪೂರ್ಣ ಸೇವೆಯೆಂದರೆ ಅಲ್ಲಿ ನಡೆಯುತ್ತಿರುವ ವಿದ್ಯಾ ಪ್ರಸಾರ. ಪ್ರಾಥಮಿಕ ಪೂರ್ವ ಹಂತದಿಂದ ಹಿಡಿದು ಸ್ನಾತಕೋತ್ತರ ಶಿಕ್ಷಣದವರೆಗೆ ಶಾಲಾ-ಕಾಲೇಜುಗಳು, ಶಿಕ್ಷಕರ ತರಬೇತಿ ಸಂಸ್ಥೆ, ಪದವಿ ಪೂರ್ವ ವಿದ್ಯಾಲಯ, ತಾಂತ್ರಿಕ ಮಹಾವಿದ್ಯಾಲಯ-ಹೀಗೆ 150ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳಲ್ಲಿ 50 ಸಾವಿರಕ್ಕೂ ಹೆಚ್ಚು ಬಡವಿದ್ಯಾರ್ಥಿಗಳಿಗೆ ಜ್ಞಾನದಾನದ ಮಹಾಸೇವೆ ನಡೆಯುತ್ತಿದೆ. ಅಲ್ಲಿನ ಸಿದ್ಧಲಿಂಗೇಶ್ವರ ಸಂಸ್ಕೃತ ಮಹಾವಿದ್ಯಾಲಯವಂತೂ ವಿಶ್ವದಲ್ಲೇ ಬೃಹತ್ ಸಂಸ್ಕೃತ ಶಿಕ್ಷಣ ಸಂಸ್ಥೆಯಾಗಿದೆ. ಅಲ್ಲಿ ಯಾವುದೇ ಜಾತಿ-ಮತ ಭೇದವಿಲ್ಲದೆ ಸಂಸ್ಕೃತ ಕಲಿಯುವ ಮಕ್ಕಳ ಸಂಖ್ಯೆಯೇ ನಾಲ್ಕು ಸಾವಿರದಷ್ಟಿದೆ.





ಗೊ.ರು. ಚನ್ನಬಸಪ್ಪ
ಅಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಬೆಂಗಳೂರು

ಶ್ರೀ ಸಿದ್ಧಗಂಗಾ ಶಿಕ್ಷಣ ಸಂಸ್ಥೆಯ ಮತ್ತೊಂದು ಮಾನವೀಯ ಸೇವೆ ಅಂಧರ ಶಾಲೆ. ತಮ್ಮ ಪಾಲಿಗೆ ಲೋಕವೇ ಕತ್ತಲೆನಿಸಿದ್ದ ನೂರಾರು ಅಂಧ ಮಕ್ಕಳಿಗೆ ಉಚಿತ ಊಟ-ವಸತಿ, ಪಾಠ-ಪ್ರವಚನಗಳಿಗೆ ಇಲ್ಲಿ ಆಶ್ರಯ ನೀಡಲಾಗಿದೆ. ಪರಮ ಪೂಜ್ಯ ಸ್ವಾಮೀಜಿ ಅವರ ದೂರದೃಷ್ಟಿಯ ಸಂಕೇತವಾಗಿರುವ ಮಹಾಸಂಸ್ಥೆ ಸಿದ್ಧಗಂಗಾ ತಾಂತ್ರಿಕ ಶಿಕ್ಷಣ ಸಂಸ್ಥೆ, ಪ್ರತಿಭಾವಂತ ಗ್ರಾಮೀಣ ಮಕ್ಕಳಿಗೆ ತಾಂತ್ರಿಕ ಶಿಕ್ಷಣ ಅವಕಾಶ ಒದಗಿಸಿರುವ ಈ ಸಂಸ್ಥೆ ಎಸ್‌ಐಟಿ ಎಂದೇ ಜನಪ್ರಿಯವಾಗಿದೆ. ಪೂರ್ಣ ಆಧುನಿಕ ರೀತಿಯಲ್ಲಿ ಸಜ್ಜುಗೊಂಡಿರುವ ಈ ಸಂಸ್ಥೆ ಶಿಕ್ಷಣ ಗುಣಮಟ್ಟದಲ್ಲಿ ಇಡೀ ಭಾರತದಲ್ಲೇ ಅಭಿಮಾನದ ಸ್ಥಾನ ಪಡೆದಿದೆ.

....14ನೇ ಪುಟ ನೋಡಿ

Scanned with ACE Scanner

# ಸಮಾಜಮುಖಿ ಚಿಂತನೆ ಮುಖ್ಯ



ತುಮಕೂರು: ನಮ್ಮೊಳಗಿನ ಅಂತಃಸತ್ವವನ್ನು ಹೊರ ಹಾಕುವ ಪ್ರಕ್ರಿಯೆ ಅಭಿವ್ಯಕ್ತಿ ಎಂದು ಡಾ. ಎಸ್. ಅಹಲ್ಯ ಹೇಳಿದರು.

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಏರ್ಪಡಿಸಿದ್ದ ಅಭಿವ್ಯಕ್ತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಭಿವ್ಯಕ್ತಿಯ ಈ ಮಹತ್ವದ ಜತೆಗೆ ಓದಿ, ಕೂಚಭಟ್ಟನಾಗುವ ಔಪಚಾರಿಕತೆಗಿಂತ ಸಾಂಸ್ಕೃತಿಕ ರಂಗದ ಪಾಲ್ಗೊಳ್ಳುವಿಕೆ, ಸಮಾಜಮುಖಿ ಚಿಂತನೆ ಮುಖ್ಯ. ಜತೆಗೆ ವಿದ್ಯಾರ್ಥಿಗಳಲ್ಲಿ ಸಮಯದ ಮಹತ್ವ, ಪರಿಶ್ರಮ, ಕಾರ್ಯಬದ್ಧತೆ, ಸವಾಲನ್ನು ಸ್ವೀಕರಿಸುವ ಗುಣಗಳ ಮಹತ್ವವನ್ನು ತಿಳಿಸಿದರು.

ಕೇವಲ ಪದವಿ, ಪುರಸ್ಕಾರಗಳಿಗಷ್ಟೇ ಜೀವನದ ಆತ್ಯಂತಿಕ ಸತ್ಯವಲ್ಲ. ಸಾಮರಸ್ಯದ ಜೀವನವೇ ಉತ್ತಮವಾದುದು ಎಂದು ಅವರು ಹೇಳಿದರು.

ಎನ್. ಕೃಷ್ಣಮೂರ್ತಿ ಮಾತನಾಡಿ, ದೇಶದ ರಕ್ಷಕನಾದ ಯೋಧನಿಗೆ ನುಡಿ ನಮನ ಸಲ್ಲಿಸಿ, ಜೀವನದ ಅವಿಭಾಜ್ಯ ಅಂಗವಾದ ತಂದೆ, ತಾಯಿ, ಗುರುವಿನ ಮಹತ್ವ, ಅವರಲ್ಲೂ ವೃದ್ಧಾಪ್ಯದಲ್ಲಿ ಹೆತ್ತವರನ್ನು ಪೋಷಿಸುವುದು, ಪ್ರೀತಿ ಆದರಗಳಿಂದ ಗೌರವಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಆನಂದಕುಮಾರಿ ಮಾತನಾಡಿ, ವಿದ್ಯಾರ್ಥಿಗಳು ಬದುಕಿನ ನಿರ್ಮಾತೃಗಳು, ಭವಿಷ್ಯದ ರುವಾರಿಗಳು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಸರ್ವಮಂಗಳ, ರೇಖಾ ಹಿಮಾನಂದ್ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮ ಸಂಚಾಲಕ ಡಾ. ಎನ್. ಪ್ರಸನ್ನಕುಮಾರ್ ಸ್ವಾಗತಿಸಿದರು. ಮಧು ಎಸ್. ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಸಂಧ್ಯಾ ವಿ. ವಂದಿಸಿದರು.

ಪ್ರಜಾಪ್ರಗತಿ ದಿನ ಪತ್ರಿಕೆ, 07.08.2019
ತುಮಕೂರು.

Scanned with ACE Scanner



ತುಮಕೂರಿನ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಜಿಲ್ಲಾಸ್ಪತ್ರೆ ಸಹಯೋಗದಲ್ಲಿ ನಡೆದ ಆರೋಗ್ಯ ತಪಾಸಣಾ ಶಿಬಿರವನ್ನು ಡಾ. ಮಾಲಿನಿ ಗೋವಿಂದನ್ ಉದ್ಘಾಟಿಸಿದರು. ಡಾ. ಮಂಜುನಾಥ್, ಪ್ರಾಂಶುಪಾಲರಾದ ಆನಂದಕುಮಾರಿ, ಪ್ರೊ. ಸರ್ವಮಂಗಳ, ಸಿ.ಎಸ್. ಸೋಮಶೇಖರ್, ಸಿ.ಎಸ್. ಕುಮಾರಸ್ವಾಮಿ, ಶೃತಿ, ಮತ್ತಿತರರು ಚಿತ್ರದಲ್ಲಿದ್ದಾರೆ.

Thu, 15 August 2019
sanjevani.epapr.in/c/42512075

ಸಂಜೆವಾಣಿ

Scanned with ACE Scanner

# ನೆರೆ ಸಂತ್ರಸ್ಥರಿಗೆ ದಿನಬಳಕೆ ವಸ್ತುಗಳ ದೇಣಿಗೆ



ತುಮಕೂರು, ಆ. ೨೩- ನೆರೆ ಸಂತ್ರಸ್ಥರಿಗಾಗಿ ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಯುವ ರೆಡ್‌ಕ್ರಾಸ್ ವತಿಯಿಂದ ಘಟಕದ ವತಿಯಿಂದ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರಿಂದ ಸಂಗ್ರಹಿಸಲಾದ ದಿನಬಳಕೆ ಮತ್ತು ಗೃಹೋಪಯೋಗಿ ವಸ್ತುಗಳನ್ನು ಭಾರತೀಯ ರೆಡ್‌ಕ್ರಾಸ್ ಘಟಕಕ್ಕೆ ನೀಡಲಾಯಿತು.

ರಾಜ್ಯದ ಸುಮಾರು 17 ಜಿಲ್ಲೆಗಳಲ್ಲಿ ಅತಿವೃಷ್ಠಿ ಮತ್ತು ಪ್ರವಾಹದಿಂದ ಲಕ್ಷಾಂತರ ಮಂದಿಯು ಬದುಕು ದುಸ್ತರಗೊಂಡಿದ್ದು, ನೆಲೆ ಕಳೆದುಕೊಂಡು ಪುನರ್ ಜೀವನ ಕಟ್ಟಿಕೊಳ್ಳಲು ಹೆಣಗಾಡುತ್ತಿರುವ ಸಂತ್ರಸ್ತರ ನೆರವಿಗೆ ಧಾವಿಸಿರುವ ಸಿದ್ಧಗಂಗಾ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ದಿನಬಳಕೆ ಮತ್ತು ಗೃಹೋಪಯೋಗಿ ವಸ್ತುಗಳನ್ನು ನೀಡುವ ಮೂಲಕ ಪ್ರವಾಡ ಪೀಡಿತರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಯುವ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿ ಕುಮಾರಸ್ವಾಮಿ ಸಿ.ಎಸ್., ಸಹ ಸದಸ್ಯರಾದ ಶೃತಿ, ಸಂಯೋಜಕರಾದ ಸಿ.ಎಸ್. ಸೋಮಶೇಖರಯ್ಯ, ಪ್ರಾಂಶುಪಾಲರಾದ ಡಾ. ಆರ್. ಆನಂದಕುಮಾರಿ, ಪ್ರೊ. ಅನಿಲ್‌ಕುಮಾರ್ ಎಂ ಮತ್ತು ವಿದ್ಯಾರ್ಥಿಗಳು ಹಾಗೂ ಯುವರೆಡ್‌ಕ್ರಾಸ್ ಘಟಕದ ಸ್ವಯಂ ಸೇವಕರು ಭಾಗವಹಿಸಿದ್ದರು.



Scanned with ACE Scanner

ಸಂಜೆವಾಣಿ
ತುಮಕೂರು
ಜಾಹೀರಾತಿಗಾಗಿ ಸಂಪರ್ಕಿಸಿ
94498 71862
5 ಶನಿವಾರ 31 ಆಗಸ್ಟ್ 2019

# ಗ್ರಂಥಾಲಯ ವಿದ್ಯಾರ್ಥಿಗಳ ಜ್ಞಾನ ಭಂಡಾರ

ತುಮಕೂರು, ಆ. ೩೧- ಇಲ್ಲಿನ ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಗ್ರಂಥಾಲಯ ಪಿತಾಮಹ ಡಾ. ಎಸ್.ಆರ್. ರಂಗನಾಥ್‌ರವರ ಜನ್ಮದಿನದ ಪ್ರಯುಕ್ತ ಪುಸ್ತಕ ಪ್ರದರ್ಶನ ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಪ್ರಾಂಶುಪಾಲರಾದ ಡಾ. ಆನಂದಕುಮಾರಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಕಡಿಮೆಯಾಗಬಾರದು ಎಂಬ ಸದುದ್ದೇಶದಿಂದ ಡಾ.ಎಸ್.ಆರ್. ರಂಗನಾಥ್ ಅವರು ಗ್ರಂಥಾಲಯಗಳನ್ನು ಆರಂಭಿಸಿದರು. ಇಂದು ಗ್ರಂಥಾಲಯಗಳ ವಿದ್ಯಾರ್ಥಿಗಳು ಜ್ಞಾನ ಭಂಡಾರವಾಗಿವೆ ಎಂದರು.

ಇಂತಹ ಪುಸ್ತಕ ಪ್ರದರ್ಶನದ ಮೂಲಕ ವಿದ್ಯಾರ್ಥಿಗಳಿಗೆ ಹಲವು ಮಹಾನ್ ಲೇಖಕರು, ಸಾಹಿತಿಗಳು ಬರೆದಿರುವ ಪುಸ್ತಕಗಳ ಪರಿಚಯವಾಗುತ್ತದೆ ಎಂದು ಅವರು ಹೇಳಿದರು.

ಗ್ರಂಥಾಲಯ ಮುಖ್ಯಸ್ಥ ಪ್ರೊ. ಎಂ.ಸಿ. ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಇಂದಿನ ತಾಂತ್ರಿಕ ಯುಗದಲ್ಲಿ ವಿದ್ಯಾರ್ಥಿಗಳಲ್ಲಿ ಓದುವುದು ಕ್ಷೀಣಿಸುತ್ತದೆ. ಎಲ್ಲವನ್ನು ಮೊಬೈಲ್, ಯುಟ್ಯೂಬ್‌ನಲ್ಲಿ ನೋಡಬಹುದು ಎಂಬ ಭ್ರಮೆಯಲ್ಲಿ ಇರುತ್ತಾರೆ ಎಂದರು.

ಪ್ರೊ. ಬಿ.ಸಿ. ಮಲ್ಲಿಕಾರ್ಜುನ ಮಾತನಾಡಿ, ಕಾಲೇಜು ಮಟ್ಟದಲ್ಲಿ ಗ್ರಂಥಾಲಯಗಳ ವಿದ್ಯಾರ್ಥಿಗಳಿಗೆ ಓದುವ ಅಭಿರುಚಿ ಬೆಳೆಸಬೇಕಾದರೆ ಇಂತಹ ಕಾರ್ಯಕ್ರಮಗಳು ಅತ್ಯವಶ್ಯಕ ಎಂದರು. ಕಾರ್ಯಕ್ರಮದಲ್ಲಿ ಪ್ರೊ. ಎನ್. ಪ್ರಸನ್ನಕುಮಾರ್, ಪ್ರೊ. ಮೋಹನ್‌ಕುಮಾರ್, ಪ್ರೊ. ಶೈಲೇಶ್, ಗಂಗಪ್ಪ, ಅಧೀಕ್ಷಕರಾದ ರೇಣುಕಪ್ರಸಾದ್, ಕುಮಾರಸ್ವಾಮಿ ಉಪಸ್ಥಿತರಿದ್ದರು.





Scanned with ACE Scanner

# ದೈಹಿಕ-ಮಾನಸಿಕ ಆರೋಗ್ಯ ಸದೃಢತೆಗೆ ಆಯುರ್ವೇದ ಪದ್ಧತಿ ಅನುಸರಣೆ ಅಗತ್ಯ

ತುಮಕೂರು, ಸೆ. ೧೧- ಪ್ರಾಚೀನ ಭಾರತದಿಂದ ಇಂದಿನವರೆಗೆ ಬಳಕೆಯಲ್ಲಿರುವ ಆಯುರ್ವೇದ ಪದ್ಧತಿಯಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ಬೆಂಗಳೂರು ವಿಶ್ವವಿದ್ಯಾಲಯದ ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಾಚಾರ್ಯರಾದ ಡಾ. ಅಹಲ್ಯ ಹೇಳಿದರು.



ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ವತಿಯಿಂದ ವಿದ್ಯಾರ್ಥಿಗಳಿಗಾಗಿ ಆರೋಗ್ಯ ಮತ್ತು ಆಯುರ್ವೇದ ಎಂಬ ವಿಷಯ ಕುರಿತು ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಡಾ. ವಿಜಯಲಕ್ಷ್ಮಿ ಮಾತನಾಡಿ, ಶರೀರದ ವಿವಿಧ ಅಂಗಗಳು ಕಾರ್ಯನಿರ್ವಹಿಸುವ ಮತ್ತು ಅವುಗಳ ಸ್ವಾಸ್ಥ್ಯ ಕಾಪಾಡುವಲ್ಲಿ ಆಯುರ್ವೇದ ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ತಿಳಿಸಿದರು.

ಡಾ. ಶಿವರಾಮ್, ಚರ್ಮ ಮತ್ತು ಕೇಶ ಆರೋಗ್ಯ ವೃದ್ಧಿಯಲ್ಲಿ ಆಯುರ್ವೇದ ಪದ್ಧತಿ ಅಳವಡಿಸಿಕೊಳ್ಳುವ ಪ್ರಾಮುಖ್ಯತೆ ಬಗ್ಗೆ, ಡಾ. ಲಲಿತ, ಸಸ್ಯಗಳಾದ ಗಂರಿತಕ, ವಿಭಿತಾಕಿ, ಅಮಲಕ, ಪಿಪಲಿ, ಮರೀಚ, ಶುಂಠಿ, ಬಿಲ್ವ, ನರಗುಂದಿ, ನಿಂಬು, ಗುಂಚಿಯಲ್ಲಿರುವ ಔಷಧೀಯ ಅಂಶಗಳು ಮತ್ತು ಅದರ ಉಪಯೋಗಗಳ ಬಗ್ಗೆ ಚಿತ್ರಗಳ ಮೂಲಕ ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ. ಆರ್. ಆನಂದಕುಮಾರಿ ಮಾತನಾಡಿ, ವಿದ್ಯಾರ್ಥಿಗಳು ಔಷಧೀಯ ಸಸ್ಯಗಳನ್ನು ನೆಟ್ಟು ಪೋಷಿಸಿ, ಸಂರಕ್ಷಿಸುವುದರ ಜತೆಗೆ ಸಾರ್ವಜನಿಕರಿಗೆ ಈ ಬಗ್ಗೆ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಾಗಾರವನ್ನು ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಎನ್. ಪ್ರಸನ್ನಕುಮಾರ್ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಬೆಂಗಳೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ವಿದ್ಯಾಲಯದ ಡಾ. ಶ್ರೀನಿವಾಸ್‌ಯಾದವ್, ಸಂಯೋಜಕರಾದ ಸೋಮಶೇಖರಯ್ಯ, ಉಪನ್ಯಾಸಕರಾದ ಕುಮಾರಸ್ವಾಮಿ, ಹರ್ಷಿ, ಪದ್ಮಶ್ರೀ, ಸಿಂಧು ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಗ್ರಂಥಾಲಯಕ್ಕೆ ಆಯುರ್ವೇದಕ್ಕೆ ಸಂಬಂಧಪಟ್ಟಂತಹ ಪುಸ್ತಕಗಳಾದ ಆಯುರ್ವೇದ ಜೀವನಶೈಲಿ, ಯೋಗ ಸಂಜೀವಿನಿ, ಪಾರಂಪರಿಕ ವೈದ್ಯ ಚಿಕಿತ್ಸಾ ಮಾಹಿತಿ ದ್ರವ್ಯ ಕೋಶ ಭಾಗ-1, 2, 3, 4 ದ್ರವ್ಯ ಕೋಶ ಭಾಗ-1, 2 ಆಹಾರದಿಂದ ಆರೋಗ್ಯ, ಮನೆಮದ್ದು, ಕೈಪಿಡಿ, ಮಕ್ಕಳಿಗಾಗಿ ಯೋಗ, ತಾಯಿ ಮತ್ತು ಮಗುವಿನ ಆರೈಕೆ ಇವುಗಳನ್ನು ಕೊಡುಗೆ ನೀಡಿದರು. ಇದರ ಜತೆಗೆ ಔಷಧೀಯ ಸಸ್ಯಗಳಾದ ಆಳಲೆ, ಮಧುನಾಶಿನಿ, ಬಿಲ್ವ, ಇನ್ನೂ ಹಲವಾರು ಸಸ್ಯಗಳನ್ನು ಕೊಡುಗೆ ನೀಡಲಾಯಿತು. ಸಸ್ಯಶಾಸ್ತ್ರ ಮುಖ್ಯಸ್ಥರಾದ ಗೀತಾಂಜಲಿ ಕೆ.ಎಸ್. ಸ್ವಾಗತಿಸಿದರು.

ನಂತರ ಸಿದ್ಧಗಂಗಾ ಮಠಕ್ಕೆ ತೆರಳಿ, 37 ಬುದ್ಧಿಮಾಂಧ್ಯ ಮಕ್ಕಳನ್ನು ಹಾಗೂ 40 ಅಂಧ ಮಕ್ಕಳ ಆರೋಗ್ಯ ತಪಾಸಣೆ ನಡೆಸಿ, ಅವರಿಗೆ ಔಷಧಿಗಳನ್ನು ವಿತರಿಸಲಾಯಿತು.

ಸಂಜೆ ನಡೆದ ಪ್ರಾರ್ಥನೆ ಸಂದರ್ಭದಲ್ಲಿ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗಸ್ವಾಮೀಜಿ ರವರ ಉಪಸ್ಥಿತಿಯಲ್ಲಿ ಆಯುರ್ವೇದ ವಿಜ್ಞಾನ ಶ್ರೀ ಮಠದಲ್ಲಿ ಚಾಚು ತಪ್ಪದೆ ಅನುಸರಿಸುತ್ತಿರುವುದರಿಂದ ಮಕ್ಕಳ ಆರೋಗ್ಯದ ಮೇಲೆ ಪ್ರಭಾವ ಬೀರಿರುವುದನ್ನು ಹಾಗೂ ಆಯುರ್ವೇದದ ಪ್ರಾಮುಖ್ಯತೆಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಾಚಾರ್ಯರಾದ ಡಾ. ಅಹಲ್ಯ ವಿವರಿಸಿದರು. ನಂತರ ಶ್ರೀಮಠದ ವತಿಯಿಂದ ಎಲ್ಲಾ ವೈದ್ಯರುಗಳನ್ನು ಸನ್ಮಾನಿಸಲಾಯಿತು.

Scanned with ACE Scanner

ದಿನಪತ್ರಿಕೆ : ವಿಜಯಕರ್ನಾಟಕ
ದಿನಾಂಕ : 4/ನವೆಂಬರ್/2019
ವಾರ : ಸೋಮವಾರ

# ಕನ್ನಡ ಭಾಷೆ ಸಶಕ್ತವಾಗಿ ಬೆಳೆಯುತ್ತಾ ಬಂದಿದೆ

**ವಿಕ ಸುದ್ದಿಲೋಕ** ತುಮಕೂರು

ಸಾವಿರಾರು ವರ್ಷಗಳಿಂದ ಎಷ್ಟೇ ಸವಾಲುಗಳು ಬಂದರೂ ಕನ್ನಡ ಭಾಷೆ ಮತ್ತು ಪ್ರದೇಶಗಳು ಅವೆಲ್ಲವನ್ನು ದಿಟ್ಟವಾಗಿ ಎದುರಿಸಿ ಸಶಕ್ತವಾಗಿ ಬೆಳೆಯುತ್ತಾ ಬಂದಿದೆ ಎಂದು ಡಾ. ಡಿ.ಎನ್. ಯೋಗೀಶ್ವರಪ್ಪ ಹೇಳಿದರು.

ನಗರದ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಏರ್ಪಡಿಸಿದ್ದ 64ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಕನ್ನಡವು ಮೊಟ್ಟ ಮೊದಲ ಬಾರಿಗೆ ಅಶೋಕನ ಲಿಪಿಯ ಉಗಮದ ಮೂಲಕ ಕರ್ನಾಟಕದಲ್ಲಿ ಆರಂಭವಾಯಿತು. ಕ್ರಿ.ಶ. 1ನೇ ಶತಮಾನದಲ್ಲಿ ಆರಂಭವಾದ ಕನ್ನಡ ಭಾಷೆ 4ನೇ ಶತಮಾನದ ಹಲ್ಮಿಡಿ ಶಾಸನದ ಮೂಲಕ ಸ್ಪಷ್ಟ ಲಿಪಿಯ ರೂಪ ಪಡೆಯಿತು. ಭಾಷಾವಾರು ಪ್ರಾಂತ್ಯವಾಗಿ ಯಾವ ಉದ್ದೇಶಕ್ಕೆ ವಿಂಗಡಣೆಯಾಗಿತ್ತೋ ಆ ಉದ್ದೇಶವನ್ನು ಸಫಲಗೊಳಿಸಿಕೊಳ್ಳುವುದೇ ಒಂದು ಸವಾಲಾಗಿದೆ ಎಂದರು.


ನಗರದ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ 64ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಚರಿಸಲಾಯಿತು. ಈ ವೇಳೆ ಡಾ. ಡಿ.ಎನ್. ಯೋಗೀಶ್ವರಪ್ಪ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಪ್ರಾಚಾರ್ಯೆ ಡಾ. ಆನಂದಕುಮಾರಿ ಮಾತನಾಡಿ, ಕನ್ನಡದ ವಿಚಾರಗಳನ್ನು ಇಂತಹ ವೇದಿಕೆಗಳ ಮೂಲಕ ತಿಳಿದುಕೊಳ್ಳುವುದು, ಹಲವಾರು ಪುಸ್ತಕಗಳನ್ನು ಅಭ್ಯಸಿಸುವುದಕ್ಕಿಂತ ಹೆಚ್ಚಿನ ಮಾಹಿತಿ ಸಂಗ್ರಹಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಿ.ಎಸ್. ಸೋಮಶೇಖರಯ್ಯ, ಬೋಧಕ, ಬೋಧಕೇತರ ಸಿಬ್ಬಂದಿ, ಎಂ.ಕಾಂ ಹಾಗೂ ಎನ್‌ಸಿಸಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

Scanned with ACE Scanner


ಪ್ರಜಾ ಪ್ರಗತಿ ಜನವರಿ 24, 2020 ಶುಕ್ರವಾರ



ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ರವರ ಪ್ರಥಮ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು . ಈ ಸಂದರ್ಭದಲ್ಲಿ ಕೋರಂ ಬಸವರಾಜು, ಪ್ರಾಂಶುಪಾಲರಾದ ಡಾ.ಆರ್. ಆನಂದಕುಮಾರಿ, ಕಾರ್ಯಕ್ರಮದಲ್ಲಿ ಬೋಧಕ, ಬೋಧಕೇತರ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪು ಟ 4
24-01-2020
ಸತ್ಯ ದರ್ಶಿನಿ
ಕನ್ನಡ ದಿನಪತ್ರಿಕೆ

# ಶಿಕ್ಷಣ ದಾಸೋಹಕ್ಕೆ ಸಿದ್ದಗಂಗಾ ಶ್ರೀಗಳ ಕೊಡುಗೆ ಅಪಾರ



ತುಮಕೂರು: ನಡೆದಾಡುವ ದೇವರು, ತ್ರಿವಿಧ ದಾಸೋಹಿ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ರವರ ದಿನಚರಿ, ದಾಸೋಹದ ಮಹತ್ವ, ಶಿಕ್ಷಣದ ಬಗ್ಗೆ ಅಪಾರ ಕಾಳಜಿಯಿಂದಾಗಿ ಹಲವಾರು ವಿದ್ಯಾ ಸಂಸ್ಥೆಗಳನ್ನು ತೆರೆದು ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಶ್ರೀಗಳ ಪಾತ್ರ ಅಪಾರವಾದದ್ದು ಎಂದು ಸಿದ್ಧಗಂಗಾ ಮಠದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೋರಂ ಬಸವರಾಜು ಹೇಳಿದರು.

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ರವರ ಪ್ರಥಮ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ.ಆರ್. ಆನಂದಕುಮಾರಿ ಮಾತನಾಡಿ, ಶಿವಕುಮಾರ ಸ್ವಾಮೀಜಿ ರವರ ಬಗ್ಗೆ ನಮ್ಮ ವಿದ್ಯಾರ್ಥಿಗಳು ತಿಳಿದುಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಬೋಧಕ, ಬೋಧಕೇತರ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಲವಣ ಕಿಶೋರ್ ಪ್ರಾರ್ಥಿಸಿದರು. ಡಾ.ಕೆ.ಎಸ್. ಶಿವಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

Scanned with ACE Scanner


ದಿನಾಂಕ: 24.01.2020
ದಿ: ಶುಕ್ರವಾರ
ಪತ್ರಿಕೆ: [illegible]

# ಶಿಕ್ಷಣ ದಾಸೋಹಕ್ಕೆ ಶ್ರೀಗಳ ಕೊಡುಗೆ ಅಪಾರ

ತುಮಕೂರು: ನಡೆದಾಡುವ ದೇವರು, ತ್ರಿವಿಧ ದಾಸೋಹಿ ಲಿಂಗೈಕ್ಯ ಡಾ. ಶ್ರೀ ಶಿವಕುಮಾರಸ್ವಾಮೀಜಿ ರವರ ದಿನಚರಿ, ದಾಸೋಹದ ಮಹತ್ವ, ಶಿಕ್ಷಣದ ಬಗ್ಗೆ ಅಪಾರ ಕಾಳಜಿಯಿಂದಾಗಿ ಹಲವಾರು ವಿದ್ಯಾ ಸಂಸ್ಥೆಗಳನ್ನು ತೆರೆದು ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಶ್ರೀಗಳ ಪಾತ್ರ ಅಪಾರವಾದದ್ದು ಎಂದು ಸಿದ್ಧಗಂಗಾ ಮಠದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೋರಂ ಬಸವರಾಜು ಹೇಳಿದರು.

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ರವರ ಪ್ರಥಮ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ.ಆರ್. ಆನಂದಕುಮಾರಿ ಮಾತನಾಡಿ, ಶಿವಕುಮಾರ ಸ್ವಾಮೀಜಿ ರವರ ಬಗ್ಗೆ ನಮ್ಮ ವಿದ್ಯಾರ್ಥಿಗಳು ತಿಳಿದುಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.



ಕಾರ್ಯಕ್ರಮದಲ್ಲಿ ಬೋಧಕ, ಬೋಧಕೇತರ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಲವಣ ಕಿಶೋರ್ ಪ್ರಾರ್ಥಿಸಿದರು. ಡಾ.ಕೆ.ಎಸ್. ಶಿವಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

# ದಾಸೋಹಕ್ಕೆ ಶ್ರೀಗಳ ಕೊಡುಗೆ ಅಪಾರ



ತುಮಕೂರಿನ ಶ್ರೀ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಸಿದ್ದಗಂಗಾ ಮಠದ ಹಿರಿಯ ಶ್ರೀ ಲಿಂ.,ಡಾ. ಶಿವಕುಮಾರ ಸ್ವಾಮೀಜಿ ಅವರ ಪ್ರಥಮ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಸಲಾಯಿತು.

■ **ವಿಕ ಸುದ್ದಿಲೋಕ** ತುಮಕೂರು

ಶಿಕ್ಷಣ ದಾಸೋಹಕ್ಕೆ ಲಿಂ.ಡಾ.ಶಿವಕುಮಾರ ಸ್ವಾಮೀಜಿ ಕೊಡುಗೆ ಅಪಾರ ಎಂದು ಸಿದ್ಧಗಂಗಾ ಮಠದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೋರಂ ಬಸವರಾಜು ಹೇಳಿದರು.

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಿದ್ಧಗಂಗಾ ಮಠದ ಹಿರಿಯ ಶ್ರೀ ಲಿಂ.ಡಾ. ಶಿವಕುಮಾರ ಸ್ವಾಮೀಜಿಗಳ ಪ್ರಥಮ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತ್ರಿವಿಧ ದಾಸೋಹಿ ಲಿಂ.ಡಾ.ಶಿವಕುಮಾರ ಸ್ವಾಮೀಜಿ ಅವರ ದಿನಚರಿ, ದಾಸೋಹದ ಮಹತ್ವ ಶಿಕ್ಷಣದ ಬಗ್ಗೆ ಅಪಾರ ಕಾಳಜಿಯಿಂದಾಗಿ ಹಲವಾರು ವಿದ್ಯಾಸಂಸ್ಥೆಗಳನ್ನು ತೆರೆದು ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹೆಚ್ಚು ಪ್ರಾಮುಖ್ಯತೆ ನೀಡಿದ್ದಾರೆ. ಅವರ ಸೇವಾಕಾರ್ಯದಿಂದ ಲಕ್ಷಾಂತರ ಮಕ್ಕಳು ಜ್ಞಾನ ಸಂಪಾದನೆ ಮಾಡಿದ್ದಾರೆ. ರಾಜ್ಯವಲ್ಲದೆ ಬೇರೆ ರಾಜ್ಯಗಳಲ್ಲಿ ಉನ್ನತ ಹುದ್ದೆಯನ್ನು ಪಡೆದುಕೊಂಡಿದ್ದಾರೆ ಎಂದು ಹೇಳಿದರು.

ಪ್ರಿನ್ಸಿಪಾಲ್ ಡಾ.ಆರ್.ಆನಂದಕುಮಾರಿ ಮಾತನಾಡಿ, ಶಿವಕುಮಾರ ಸ್ವಾಮೀಜಿ ಅವರ ಬಗ್ಗೆ ನಮ್ಮ ವಿದ್ಯಾರ್ಥಿಗಳು ತಿಳಿದುಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಲವಣ ಕಿಶೋರ್, ಡಾ.ಕೆ. ಎಸ್.ಶಿವಪ್ರಸಾದ್, ಬೋಧಕ, ಬೋಧಕೇತರ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿನಾಂಕ: 24.01.2020
ದಿ: ಶುಕ್ರವಾರ
ಪತ್ರಿಕೆ: ವಿಜಯ ಕರ್ನಾಟಕ

Scanned with ACE Scanner

ಜನವರಿ 28, 2020 ಮಂಗಳವಾರ ಪ್ರಜಾವಾಣಿ




ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆದ 71 ನೇ ಗಣರಾಜ್ಯೋತ್ಸವವನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ|| ಆರ್. ಆನಂದ ಕುಮಾರಿ ಮತ್ತು ಮುಖ್ಯ ಅತಿಥಿಗಳಾಗಿ ಆಗಮಿಸಿದ ಹವಲ್ದಾರ್ ಶಿವಲಿಂಗಯ್ಯ ಹಿರೇಮಠ್ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಎನ್.ಸಿ.ಸಿ. ಅಧಿಕಾರಿಗಳು ಮತ್ತು ಆಧ್ಯಾಪಕರು ಭಾಗವಹಿಸಿದ್ದರು.

Scanned with ACE Scanner